ಕಾರ್ಪೊರೇಟ್ ಸೇವೆಯಂತೆ ನಿರ್ವಹಿಸುವ ವಿದ್ಯಾರ್ಥಿ ತಂಡಗಳು ಬಾಯಿಗೆ ಮೈಕ್ ಸಿಕ್ಕಿಸಿಕೊಂಡು ಪ್ರತಿಯೊಂದು ವಿಧಿವಿಧಾನವನ್ನೂ ತರಗತಿಯ ಪಠ್ಯದಂತೆ ಜನರೆದುರು ಒಪ್ಪಿಸುತ್ತಾರೆ. ದೀಪ ಹಚ್ಚಿಸುವುದು, ಬೆಳಗುವುದು ಎಲ್ಲವೂ ಕಲಾತ್ಮಕವಾಗಿಯೂ, ಪ್ರಾಯೋಗಿಕ ಪ್ರದರ್ಶನದಂತೆಯೂ ವಿಶಿಷ್ಟವಾಗಿರುತ್ತವೆ. ಕಡೆಯಲ್ಲಿ ದಕ್ಷಿಣೆ ನೀಡದೇ ಪ್ರಸಾದ ಕೊಡುವುದಿಲ್ಲ ಎಂಬ ಘೋಷಣೆಯೂ ಆಗಾಗ ನಡೆಯುತ್ತದೆ. ಇದನ್ನು ಭಕ್ತಿಯಿಂದ ಕಣ್ತುಂಬಿಕೊಳ್ಳುವವರು ನೂರಾರು ಮಂದಿ. ಅವರಿಗೆ ಇದು ತರಗತಿಯ ಲ್ಯಾಬೊರೇಟರಿಯಂತೆ ಕಾಣುವುದಿಲ್ಲ!

ಇಂದು ಬಹುತೇಕ ದೊಡ್ಡ ದೇವಾಲಯಗಳು ಕಾರ್ಪೊರೇಟ್ ಸ್ವರೂಪವನ್ನು ಹೊಂದಿವೆ. ಕುಳಿತಲ್ಲಿಂದ ಪೂಜೆ, ಸೇವೆಗಳನ್ನು ಬೆರಳ ತುದಿಯಲ್ಲಿ ಆಯ್ಕೆ ಮಾಡಿಕೊಂಡು ಹಣ ಪಾವತಿಸುವ ಆಯ್ಕೆಗಳಿವೆ. ವಿಮಾನಗಳು, ರೈಲು, ಟ್ರಾವೆಲ್ಸ್ ಬಸ್‌ಗಳು ಅಥವಾ ಸ್ವಂತ ವಾಹನಗಳನ್ನು ಏರಿ ಆ ಸ್ಥಳಗಳನ್ನು ತಲುಪಿ ಹವಾನಿಯಂತ್ರಿತ ಕೊಠಡಿಗಳಲ್ಲಿ ಜನರು ಉಳಿದುಕೊಳ್ಳುತ್ತಾರೆ. ನಂತರ ದೇವಾಲಯದ ಆವರಣದೊಳಗೆ ಸರದಿ ಸಾಲಿನ ಗೋಜಿಲ್ಲದ ವಿಶೇಷ ಸಾಲಿನಲ್ಲಿ ಪ್ರವೇಶಿಸಿ ವಶೀಲಿ, ಹಣದ ಮೂಲಕ ಶೀಘ್ರ ದರ್ಶನ ಭಾಗ್ಯವನ್ನೂ ಪಡೆಯುತ್ತಾರೆ. ದರ್ಶನದ ಬಳಿಕ ಕೊಂಚ ಗತ್ತಿನಿಂದ ಹೊರಬಂದು ಸರತಿಯಲ್ಲಿ ಬವಣೆ ಪಡುತ್ತಿರುವರತ್ತ ನೋಟ ಹರಿಸಿ ತೆರಳುವವರು ಒಂದು ಗುಂಪಿನವರಾದರೆ ಇನ್ನೊಂದು ದೊಡ್ಡ ಗುಂಪು ಇಂಥವರನ್ನು ಬೆರಗಿನಲ್ಲಿ ನೋಡುತ್ತ, ತಮ್ಮ ಪಾಳಿಗಾಗಿ ತಾಸುಗಟ್ಟಲೆ ಬಿಸಿಲು, ಮಳೆ, ಚಳಿ ಎನ್ನದೇ ಮಕ್ಕಳು ಮರಿಗಳು, ವಯೋವೃದ್ಧ, ಹಿರಿಯರ ಜೊತೆಗೂಡಿ ಭಗವಂತನ ಒಂದು ಕ್ಷಣದ ದರ್ಶನಕ್ಕಾಗಿ ಕಾಯುತ್ತದೆ.

ಇಷ್ಟೊಂದು ಅಗಾಧ ಪ್ರಮಾಣದಲ್ಲಿ ಬೆಳೆಯುತ್ತಿರುವ ದೇವಾಲಯ ಪ್ರವಾಸದಲ್ಲಿ ಇತ್ತೀಚೆಗೆ ಭಕ್ತರ ಭಕ್ತಿಯ ಅಬ್ಬರ ಹೆಚ್ಚುತ್ತಿದೆ. ಶಾಂತಿ, ಸಹನೆಯನ್ನು ಕಲಿಸುತ್ತಿದ್ದ ಭಕ್ತಿ, ಗದ್ದಲ, ನೂಕಾಟ, ತಳ್ಳಾಟ, ಜನಜಂಗುಳಿಯ ತಾಣವಾಗುತ್ತಿದೆ. ಸರದಿಯಲ್ಲಿ ಕಾಯುವ ಹೊತ್ತು ಅತ್ತೆನಾದಿನಿಯರ, ಭಾವಮೈದುನರ, ಅಕ್ಕಪಕ್ಕದವರ ಕುರಿತು ಹೆಣ್ಣುಮಕ್ಕಳೂ, ಹಿಂದಿನ ದಿನದ ಪಾರ್ಟಿ, ನಿದ್ದೆ, ಸ್ನೇಹಿತರ ಬಗ್ಗೆ ಗಂಡಸರೂ ಚರ್ಚಿಸುತ್ತಾ ಕಾಲ ಕಳೆದು ಇನ್ನೇನು ಗೇಟು ತೆರೆಯುತ್ತದೆ ಎಂದಾಗ ಮೈಕೊಡವಿ ನಿಂತು ಜೈಕಾರ ಕೂಗುತ್ತ ಭಕ್ತಿ ಪ್ರದರ್ಶನ ಮಾಡುವವರು ಎಲ್ಲೆಡೆ ಕಾಣಸಿಗುತ್ತಾರೆ. ಸ್ವರ್ಗವೆಂದರೆ ಇದೇ ಇರಬೇಕು ಎನ್ನಿಸುವ ಪ್ರಶಾಂತ ಕೇದಾರನಾಥದಲ್ಲಿ ಬಾಜಾ ಭಜಂತ್ರಿಯೊಂದಿಗೆ ಕುಣಿಯುವ ಭಕ್ತ ಸಮೂಹ, ಎಲ್ಲ ಧಾರ್ಮಿಕ ಕ್ಷೇತ್ರಗಳಲ್ಲಿ ಸಾಲು ಸಾಲು ವಾಹನಗಳು, ಯೂಟ್ಯೂಬರ್‌ಗಳ ದಂಡು, ಭಕ್ತ ಸಮೂಹದ ಕೂಗು ಜೈಕಾರಗಳಿಂದ ಆ ಸ್ಥಳದ ಏಕಾಂತತೆಗೆ ಭಂಗ ಉಂಟಾಗುತ್ತದೆಯೇ ಎನಿಸುತ್ತದೆ. ನೀರು ಕಂಡಲ್ಲೆಲ್ಲ ಮುಳುಗೇಳುತ್ತ ದೇಹ ಕಲ್ಮಶವನ್ನು ನೀರಿಗೆ ಸೇರಿಸುವುದರೊಂದಿಗೆ ತೊಟ್ಟ ಬಟ್ಟೆಯನ್ನು ಕಳಚಿ ಎಲ್ಲೆಂದರಲ್ಲಿ ಬಿಸುಟಿ ಪರಿಸರವನ್ನು ಹಾಳುಗೆಡವುದರ ಪರಿಕಲ್ಪನೆಯೂ ಇರದಂತಹ ನಿರ್ಮಮ ಮನಸ್ಥಿತಿಯನ್ನು ಯಾವ ಹೆಸರಿಂದ ಕರೆಯಲಾದೀತು? ಬೆಟ್ಟ, ಗುಡ್ಡ, ನೀರು, ನದಿ, ಗಿಡ, ಮರ, ಸಸ್ಯ ಸಂಪತ್ತು, ಇರುವ ಎಂಬತ್ತು ಕೋಟಿ ಪ್ರಾಣಿ ಪಕ್ಷಿ ಸಂಕುಲಗಳಲ್ಲಿ ದೈವ ಸ್ವರೂಪವನ್ನೇ ಕಂಡು ಪೂಜಿಸಿದ ವೇದ ಪುರಾಣಗಳಾಗಲೀ, ಮಹಾಕಾವ್ಯಗಳ ನಿರೂಪಣೆಗಳಾಗಲೀ, ಜನಪದ ಸಾಹಿತ್ಯವಾಗಲೀ ಜನರನ್ನು ತಟ್ಟದೇ, ಅವರ ಅಂತರಾತ್ಮಗಳಲ್ಲಿ ನೆಲೆಗೊಳ್ಳದೇ ಈ ಪರಿಯ ಸಂವೇದನಾರಹಿತರನ್ನಾಗಿಸಿದ ಸ್ಥಿತಿಯನ್ನು ಭಕ್ತಿ ಎಂತಾದರೂ ಕರೆಯಬಹುದೇ?

ನಮ್ಮ ಹಿರಿಯರು ನೀರಲ್ಲಿ ಎಂದಾದರೊಮ್ಮೆ ಮುಳುಗು ಹಾಕುತ್ತಿದ್ದರಷ್ಟೇ. ಬಟ್ಟೆಯನ್ನೆಂದೂ ಅಲ್ಲಿ ಬಿಡುತ್ತಿರಲಿಲ್ಲ. ಬಿಸುಟುವಷ್ಟು ಬಟ್ಟೆಗಳೂ ಆಗ ಇರುತ್ತಿರಲಿಲ್ಲವೆನ್ನಿ. ತಮ್ಮ ನೀರು ನಿಡಿಯನ್ನು ಅಲ್ಪ ಪ್ರಮಾಣದಲ್ಲಿ ತಾವೇ ಕೊಂಡು ಹೋಗಿ ಅಲ್ಲೇ ಅಟ್ಟು ಉಂಡು ಯಾವ ಕಸವನ್ನೂ ಪ್ರಕೃತಿಗೆ ಸೇರಿಸದೇ ಬರುತ್ತಿದ್ದರು. ನೆರಳು, ಶುದ್ಧ ಗಾಳಿ ಕೊಡುವ ಅಪರೂಪದ ಮರಗಳನ್ನು ದೇವರೆಂದು ಪೂಜಿಸುತ್ತಿದ್ದರು. ದೇವರು, ದೈವಗಳ ನಂಬುಗೆಗಳ ಮೂಲಕ ಕಾಡನ್ನು, ನಾಗಬನಗಳನ್ನು ರಕ್ಷಿಸುತ್ತಿದ್ದರು. ಯಾವ ದೇವರ ಮೂರ್ತಿಯೂ ಇಲ್ಲದ, ದೇವಾಲಯವೂ ಇಲ್ಲದ ಕೈಲಾಸ ಪರ್ವತ ಇಂದಿಗೂ ಅತ್ಯಂತ ನೆಚ್ಚಿನ, ಆಕರ್ಷಣೆಯ ಧಾರ್ಮಿಕ ಕ್ಷೇತ್ರ. ಭೂಮ್ಯಾಕಾಶಗಳು ಒಂದಾಗಿ ನಿಂತಿರುವ ಈ ಅಗಾಧತೆಯೇ ದೈವ ಸಾಕ್ಷಾತ್ಕಾರ. ಅದರೆದುರು ಮಾನವ ಎಷ್ಟು ಅಲ್ಪ ಎನ್ನುವುದನ್ನು ಈ ಪ್ರಕೃತಿ ಸಾರಿ ಸಾರಿ ಹೇಳುತ್ತದೆ. ಅದಕ್ಕೆ ಕಿವಿಗೊಡದೇ ಅಬ್ಬರದಲ್ಲಿ, ಗೌಜಿ ಗದ್ದಲದಲ್ಲಿ, ಮುಳುಗೇಳುವುದರಲ್ಲಿ, ಹಾರಾಟ ತಾರಾಟಗಳಲ್ಲಿ, ಉದ್ದನೆಯ ಸರತಿ ಸಾಲಿನಲ್ಲಿ, ಹುಂಡಿಗೆ ಕಾಣಿಕೆ ಹಾಕುವುದರಲ್ಲಿ, ಬಂಗಾರದ, ಬೆಳ್ಳಿಯ ಹೊದಿಕೆಗಳನ್ನು ದೇವಾಲಯಗಳಿಗೆ ಹಾಕುವುದರಲ್ಲಿ ಭಕ್ತಿ ಸೂರೆಯಾಗುತ್ತಿದೆ.



'ಬೆಟ್ಟದ ಮೇಲೊಂದು ಮನೆಯ ಮಾಡಿ...' ಎಂದು ಅಕ್ಕಮಹಾದೇವಿ ಹೇಳಿದ್ದರೂ ಆಕೆ ಆಶ್ರಯಿಸಿದ್ದು ಜನರಿಂದ ದೂರವಾಗಿದ್ದ ಶ್ರೀಶೈಲದ ಬೆಟ್ಟದ ಮಧ್ಯದ ಗುಹೆಗಳನ್ನು. ಕೊನೆಗೆ ನಡೆದದ್ದು ಹುಲಿಗಳ ಆವಾಸಸ್ಥಾನವಾದ ಕದಳಿಗೆ. ಜೈನ ಮುನಿಗಳು ಬಹುತೇಕವಾಗಿ ಇದ್ದದ್ದು ಎತ್ತರದ ಬೆಟ್ಟಗಳಲ್ಲಿ. ಅಜಂತಾ ಎಲ್ಲೋರದ ಗುಹೆಗಳು, ಬಾದಾಮಿಯ ಗುಹೆಗಳು ಇರುವುದು ಬೆಟ್ಟಗಳಲ್ಲಿ, ಶಿವನ ಬಹುತೇಕ ಸ್ಥಳಗಳು ಹಿಮಾಲಯದ ಪರ್ವತ ಶ್ರೇಣಿಗಳ ದುರ್ಗಮ ಸ್ಥಳಗಳಲ್ಲಿ, ಪಾಂಡವರ ವನವಾಸದ ಐತಿಹ್ಯವನ್ನು ಹೇಳುವ, ಭಾರತದಾದ್ಯಂತ ಇರುವ ಹತ್ತಾರು ಸ್ಥಳಗಳಿರುವುದು ಬೆಟ್ಟಗಳ ಮೇಲೆ, ಕಾಡಿನ ನಡುವೆ ಅಥವಾ ಜನರಿಂದ ಮರೆಯಾಗಿರುವ ಅನಾಮಧೇಯ ಜಾಗಗಳಲ್ಲಿ. ಶಂಕರಾಚಾರ್ಯರು ಮೊದಲು ಮಠ ಸ್ಥಾಪಿಸಿದ್ದು ಹಿಮಾಲಯದ ತಪ್ಪಲಿನಲ್ಲಿ. ತಮ್ಮ ಕೊನೆಯ ಕಾಲವನ್ನು ಕಳೆದದ್ದು ಕೇದಾರನಾಥದಲ್ಲಿ.

